# ಸಾಹಿತ್ಯದಲ್ಲಿ ಮಾಧ್ಯಮಗಳ ಪ್ರಭಾವ

**ಭಾಗ್ಯಶ್ರೀ ಎಸ್. ಕಲಶೆಟ್ಟಿ**

ಸಹಾಯಕ ಪ್ರಾಧ್ಯಾಪಕರು, ಬಿ.ಬಿ.ಎ (ಮಹಿಳಾ) ವಿಭಾಗ, ಶರಣ ಬಸವ ವಿಶ್ವವಿದ್ಯಾಲಯ, ಕಲಬುರಗಿ.

**DOI: https://doi.org/10.5281/zenodo.17255847**

## ABSTRACT:

ಸಾಹಿತ್ಯ ಒಂದು ಸಾಗರ, ಸಾಗರದಲ್ಲಿ ಧುಮುಕಿ ಈಜುವ ಜೀವನ ಬಹು ಸುಂದರ, ಆನಂದವನ್ನು ಕೊಡುವುದರ ಜೊತೆಗೆ ಮನುಕುಲಕ್ಕೆ ಅಮೃತವನ್ನು ಧಾರೆಯೆರಿಯುವ ಸಾಹಿತ್ಯದ ಕೊಡುಗೆ ಅಪಾರ. ಸಾಹಿತ್ಯದಲ್ಲಿ ನಾನಾ ಪ್ರಕಾರಗಳು. ಅದು ಮನುಷ್ಯನಿಗೆ ಒಂದಿಲ್ಲದ ಒಂದು ರೀತಿ ಆಯುಷ್ಯ ಹೆಚ್ಚಿಸುವ ಸಂಜೀವಿನಿಯಂತೆ. ಸಾಹಿತ್ಯ ಜನರ ನಡುವೆ ಸಂಬಂಧ ಕಲ್ಪಿಸುವ ಅದ್ಭುತ ಸಾಧನ. ಸಾಹಿತ್ಯ, ಸಂಗೀತ, ಯಕ್ಷಗಾನ, ನಾಟಕ, ನೃತ್ಯ, ಇತ್ಯಾದಿಗಳ ಮೂಲಕ ನಂಟು ಏರ್ಪಡುವುದು. ಒಂದು ಪಟ್ಟಣದಿಂದ ಇನ್ನೊಂದು ಪಟ್ಟಣಕ್ಕೆ ಜನರು ಸೇರಿ ಸಂತೋಷ ಹಂಚಿಕೊಳ್ಳುತ್ತಿದ್ದರು. ಆದರೆ ಆಧುನಿಕತೆಯಲ್ಲಿ ಸಮೂಹ ಮಾಧ್ಯಮಗಳ ಬಳಕೆಯಿಂದ ಜನರ ನಡುವಿನ ಬಾಂಧವ್ಯ ಮಾಧ್ಯಮಗಳ ಮೂಲಕವೇ ಆಗುತ್ತಿದೆ.

ಸಾಹಿತ್ಯದಲ್ಲಿ ಪಂಪಪೂರ್ವಯುಗದಿಂದಲೂ ಸಾಹಿತ್ಯವಿತ್ತು. ಆದರೆ ಸಮೂಹ ಮಾಧ್ಯಮಗಳ ಬಳಕೆ ಇರಲಿಲ್ಲ. ಆದರೆ ದಂಡಿ, ವಾಮನ, ಅಸಗ, ಗುಣನಂದಿ, ಮುಂದೆ ಬಂದ ಪಂಪ, ಪೊನ್ನ, ರನ್ನ ಸಹೃದಯರಿಗೆ ಕನ್ನಡ ಕಂಪುನ್ನು ಎಲ್ಲಡೆ ಬೀರಿದ್ದಾರೆ. 12ನೇ ಶತಮಾನದಲ್ಲಿ ಬಸವಣ್ಣ, ಅಕ್ಕಮಹಾದೇವಿ, ಜೇಡರ ದಾಸಿಮಯ್ಯ ವಚನಗಳ ಮೂಲಕ ಸಾಹಿತ್ಯವನ್ನು ಬೆಳೆಸಿದರು. ಆಧುನಿಕತೆಯಲ್ಲಿ ಕುಮಾರವ್ಯಾಸ ಸಾಹಿತ್ಯ ಎಂಬ ಮರವನ್ನು ವಿಶಾಲವಾಗಿ ಬೆಳೆಸಿದರು. ಮೊದಲು ಸಾಹಿತ್ಯ, ಕತೆ, ನಾಟಕ, ಪದ್ಯ, ಪಾಠಗಳ ಮೂಲಕ ಜನರಿಗೆ ನೇರವಾಗಿ ತಲುಪುತ್ತಿತ್ತು. ಆದರೆ ಈಗ ಅದೇ ಮಾಧ್ಯಮಗಳ ಮೂಲಕ ತಲುಪುತ್ತದೆ. ವ್ಯತ್ಯಾಸವಿಷ್ಟೆ, ಜನಸಾಮಾನ್ಯರು ಎಲ್ಲರೂ ಒಟ್ಟಿಗೆ ಕೂಡಿ ಸಾಹಿತ್ಯ ರುಚಿಯನ್ನು ಸವಿಯುತ್ತಿದ್ದರು. ಆದರೆ ಮಾಧ್ಯಮಗಳ ಆರಂಭದಿಂದ ಮನುಷ್ಯ ಒಬ್ಬಂಟಿಯಾಗಿದ್ದಾನೆ. ಉದಾ: ಮೊಬೈಲ್. ಕನ್ನಡ ಸಾಹಿತ್ಯ ಪರಂಪರೆ ಉಳಿಸಿ, ಆಧುನಿಕತೆಯನ್ನು ಅಳವಡಿಸಿ.

ಸಾಹಿತ್ಯ ಮತ್ತು ಮಾಧ್ಯಮಗಳೆರಡು ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವಂತೆ ಕಾಣಿಸುತ್ತದೆ. ಒಂದು ಅಂತರಂಗದ ಜೊತೆ ಸಖ್ಯ ಬೆಳೆಸುತ್ತದೆ. ಇನ್ನೊಂದು ಬಹಿರಂಗದಲ್ಲಿ. ಆದರೆ ಇವೆರಡನ್ನು ದೂರವಿಡಲು ಸಾಧ್ಯವಿಲ್ಲ. ಸಾಹಿತ್ಯದ ರೂಪ, ಸೊಗಡು ಒಂದೊಂದು ಕಾಲಕ್ಕೆ ಒಂದೊಂದು ರೀತಿಯಲ್ಲಿ ಬದಲಾವಣೆ ಸ್ವರೂಪ ಪಡೆಯುತ್ತದೆ. ಸಾಹಿತ್ಯದಲ್ಲಿ ನಿರಂತರ ಬದಲಾವಣೆಯಾಗುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ಮೊದಲು ಸಂಜೆ ಹೊತ್ತು ಮನೆ ಜಗಲಿಯ ಮೇಲೆ

ಕುಳಿತು ಕತೆ ಹೇಳುತ್ತಿದ್ದರು. ಅವರ ಮಾತು, ಧ್ವನಿಗಳೇ ಮಾಧ್ಯಮಗಳಾಗಿದ್ದವು.

ಸಾಹಿತ್ಯದಲ್ಲಿ ಯಾವುದೇ ಒಂದು ವಿಷಯವನ್ನು ಜನರಿಂದ ಜನರಿಗೆ ತಿಳಿಸಲು ನಾಟಕ, ಸಂಗೀತದ ಮೂಲಕ ತಲುಪುತ್ತಿತ್ತು. ಆದರೆ ಈಗಿನ ಯುಗದಲ್ಲಿ ಮಾಧ್ಯಮಗಳೇ ಜನರಿಂದ ಜನರಿಗೆ ತಲುಪಿಸುವ ಸೇತುವೆಯಾಗಿದೆ. ಮೊದಲು ಜನರು ತಮ್ಮ ಮನೆಗಳಲ್ಲಿ ಮಕ್ಕಳಿಗೆ ನೀತಿ ಕಥೆಗಳನ್ನು ಹೇಳಲು ಅಜ್ಜಿಯ ಸಹಾಯ ಪ್ರೀತಿಯಿಂದ ಆಲಿಸುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಜಂಗಮವಾಣಿ, ದೂರದರ್ಶನ, ಅಂಚೆ, ಮಿಂಚಂಚೆ, ವೆಬ್‌ಸೈಟ್, ಇಂಟರ್‌ನೆಟ್ ಬಳಕೆ. ಬ್ರಿಟಿಷರ ಆಗಮನ ತರುವಾಯ ನಮ್ಮ ಸಾಹಿತ್ಯ ಸಂಸ್ಕೃತಿಗಳು ದೇಶದಲ್ಲಿ ಬದಲಾವಣೆ ಹೊಂದಿ ಅಂಚೆ ವ್ಯವಸ್ಥೆ ವ್ಯಾಪಕವಾಗಿ ಹರಡಿತು.

**KEYWORDS:**

ಸಾಹಿತ್ಯ, ಸಾಧನೆ ಸಾಹಿತ್ಯ, ಸಂಗೀತ, ಯಕ್ಷಗಾನ, ನೀತಿ ಕಥೆ, ಜಂಗಮ ವಾಣಿ, ದೂರದರ್ಶನ, ಅಂಚೆ, ಮಿಂಚಂಚೆ.

ಹಿಂದಿನ ಕಾಲದಲ್ಲಿ ಮಗು ಅಳುತ್ತಿದ್ದರೆ ತಾಯಿಯು ಲಾಲಿ ಹಾಡು ಹೇಳಿ ಮಗುವನ್ನು ಮಲಗಿಸುತ್ತಿದ್ದರು. ಆದರೆ ಆಧುನಿಕತೆಯಲ್ಲಿ ಮಗು ಅಳುತ್ತಿದ್ದರೆ ಮಗುವಿಗೆ ಮೊಬೈಲ್ ಕೊಟ್ಟು ಸಮಾಧಾನ ಮಾಡಿಸುತ್ತಾರೆ. ಇದು ಸಾಹಿತ್ಯದ ಮಾಧ್ಯಮಗಳ ಪ್ರಭಾವವೆಂದು ಹೇಳಬಹುದು. ಹಾಗು ಗೃಹಪ್ರವೇಶ ಪೂಜೆ ಮಾಡುವಾಗ ಗುರು ವೃಂದದವರು ಹೋಮ, ಮಂತ್ರ, ಗಂಟೆ, ಜಾಗರಣೆ, ಸಂಗೀತ ಕಾರ್ಯಕ್ರಮಗಳು ಮಾಡುತ್ತಿದ್ದರು. ಆಧುನಿಕತೆಯಲ್ಲಿ ಗುರುಗಳು ಎಲ್ಲಿಯೋ ಇದ್ದು ಮೊಬೈಲ್‌ಗಳ ಮೂಲಕ ಮಂತ್ರ, ಹೋಮ, ಪೂಜೆಗಳು ಮುಗಿಸುವರು. ಮನುಷ್ಯ ಬೆಳೆದಂತೆಲ್ಲ ಜನರ ಸಂಪರ್ಕಗಳಿಗೆ ಕಡಿವಾಣವಾಗುತ್ತಿದೆ. ಮನುಷ್ಯನು ದೇವರ ಪೂಜೆ, ಧ್ಯಾನ ಮಾಡಲು ಸಮೂಹ ಮಾಧ್ಯಮಗಳ ಮೊರೆಹೋಗುತ್ತಾನೆ. ಅದೇ ರೀತಿ ಮನುಷ್ಯನ ಆರೋಗ್ಯವು ಕೂಡ ಯಂತ್ರಗಳ ಮೂಲಕವೇ ಆಗಿದೆ. ಉದಾ: ಸ್ಕ್ಯಾನಿಂಗ್ ಯಂತ್ರ, ಎಮ್. ಆರ್. ಐ. ಯಂತ್ರ ಇತ್ಯಾದಿ.

ಹಳೆಕಾಲದಲ್ಲಿ ಸಹೋದರ ಸಹೋದರಿಯರು, ಅಪ್ಪ, ಅಮ್ಮ, ಗಂಡ, ಹೆಂಡತಿ ಪ್ರೀತಿ ಸಂಬಂಧಗಳು ನೂರು ಕಾಲ ಬಾಳಿ ಬದುಕುವ ಜ್ಯೋತಿಯಂತೆ ಆಕರ್ಷಿಸುತ್ತಿದ್ದವು. ಆದರೆ ಸಮೂಹ ಮಾಧ್ಯಮಗಳು ಬಂದ ನಂತರ ಈ ಎಲ್ಲ ಸಂಬಂಧಗಳಲ್ಲಿ ಪ್ರೀತಿ, ಕಾಳಜಿ ಕಡಿಮೆಯಾಗುತ್ತಲೇ ನಡೆದಿದೆ. ಮನೆಮಗಳು ಗಂಡನ ಮನೆಗೆ ಹೋದಾಗ ಬಳೆಗಾರನಿಗೆ ಹಾಡಿನ ಮೂಲಕವೇ ತನ್ನ ತವರೂರಿನ ವರ್ಣನೆಮಾಡುವುದು ಎಷ್ಟು ಸೊಗಸಾಗಿದೆ. ಆದರೆ ಕಂಪ್ಯೂಟರ್ ಯುಗದಲ್ಲಿ ಜಂಗಮವಾಣಿಗಳ ಮೂಲಕ ಸಂಗೀತಗಳ ಪ್ರಭಾವ. “ಕೊಟ್ಟ ಹೆಣ್ಣು ಕುಲಕ್ಕೆ

ಹೊರಗಂತೆ'' ಹಾಡುಗಳು ಕೇಳುವುದು.

ಮೊದಲು ರಾಜ ಮಹಾರಾಜರ ಪ್ರೀತಿ ಸಲ್ಲಾಪಗಳ ಪ್ರೇಮ ಪತ್ರಗಳ ರವಾನೆ ಪಾರಿವಾಳಗಳ ಮೂಲಕವೇ ನಡೆಯುತ್ತಿತ್ತು. ಅರಮನೆಯಲ್ಲಿ ಸ್ವಯಂವರ ಇತ್ಯಾದಿ. ಆದರೆ ಈಗೀನ ಕಾಲದಲ್ಲಿ ಮೊಬೈಲ್, ಮೆಸೇಜ್, ಮೇಲ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಈ ರೀತಿಯ ಪ್ರೇಮಪತ್ರಗಳು. ಮತ್ತು ಪ್ರೇಮಿಗಳ ಸುಮಧುರ ಸಂಗೀತ: ''ಕುಶಲವೇ, ಕ್ಷೇಮವೇ, ಸೌಖ್ಯವೇ'' ಎಂದು ಮಧುರವಾಗಿ, ಇಂಪಾಗಿ ಇರುತ್ತದೆ. ಆದರೆ ಸಮೂಹ ಮಾಧ್ಯಮಗಳ ಹಾಡು ''ಟೆಲಿಫೋನ್ ಗೆಳತಿ ವೆಲ್‌ಕಮ್ ವೆಲ್‌ಕಮ್, ನಿನ್ನ ಹೃದಯವೇ ನನಗೆ ಕಿಂಗ್‌ಡಮ್ ಕಿಂಗ್‌ಡಮ್''.

**ಸಾಹಿತ್ಯದಲ್ಲಿ ಮಾಧ್ಯಮಗಳಿಂದ ಆಗುವ ಬದಲಾವಣೆಗಳು:**

ಮೊದಲೇ ಹೇಳಿದ ಹಾಗೆ ಜೀವನ ಒಂದು ಸಾಗರ. ಸಮುದ್ರ ನೀರು ಹರಿಯುವ ಹಾಗೆ ಜೀವನ, ಜ್ಯೋತಿ ಬೆಳಗುವ ಹಾಗೆ ಸಾಹಿತ್ಯದ ನೂನ್ಯತೆಹೊಸತನದ ಜೊತೆ ಬದುಕಿನ ಬಂಡಿ ಹೊಸ ಹೊಸ ಆಯಾಮದ ಜೊತೆ ಸಾಗಲೇ ಬೇಕು. ಸುಖದು:ಖ ಗೋಡೆಯ ಮೇಲಿನ ಸುಣ್ಣದ ಹಾಗೆ. ಅದೇ ರೀತಿ ಮನುಷ್ಯ ಬೆಳೆದಂತೆ ಸಾಹಿತ್ಯವು ಹೊಸ ಹೊಸ ತಂತ್ರಜ್ಞಾನ, ಸಂಶೋಧನೆ ಜೊತೆಗೆ ಹಳೆಯ ಬಂಡೆಯ ಜೊತೆಗೆ ಹೊಸ ಪುಷ್ಪಕವಿಮಾನ ಹತ್ತಲೇಬೇಕು, ಅದೆ ಜೀವನ. ಇನ್ನೊಂದೆಡೆಯಲ್ಲಿ ಮುದ್ರಣ ವ್ಯವಸ್ಥೆ ಜಾರಿಯಲ್ಲಿತ್ತು. ಮೊದಲು ರಾಜಮಹಾರಾಜರು ತಾಳೆಗರಿಯ ಮೇಲೆ, ಮರಗಳ ತೊಗಟೆಯ ಮೇಲೆ ಬರೆಯುತ್ತಿದ್ದರು. ನಂತರ ಮುದ್ರಣಗಳ ಕೊಡುಗೆಯನ್ನು ಮರೆಯುವಂತಿಲ್ಲ. ಪತ್ರಿಕೆಗಳು ಸಂಪರ್ಕ, ಸಾರಿಗೆ ವ್ಯವಸ್ಥೆ ಮೂಲಕ ಊರಿಂದ ಊರಿಗೆ ಪತ್ರಿಕೆಗಳ ಮೂಲಕ ಸುದ್ದಿ ಹರಡುತ್ತವೆ.

ಪತ್ರಿಕೆಗಳು ಜನರಲ್ಲಿ ಜ್ಞಾನವನ್ನು ಹೆಚ್ಚಿಸುವುದರ ಜೊತೆಗೆ ನವ ಸಮಾಜ ನಿರ್ಮಾಣದ ಕಡೆಗೆ ಹೆಜ್ಜೆ ಹಾಕುತ್ತಿದೆ. ಸ್ವಾತಂತ್ರ್ಯ ಹೋರಾಟಗಾರರು ಸ್ವಾತಂತ್ರ್ಯ ಕೊಟ್ಟು ರಕ್ತದ ಓಕಳಿ ಹರಿಸಿ ಮಣ್ಣಲ್ಲಿ ಮಣ್ಣಾದ ಸಾಧಕರ ಬಗ್ಗೆ ಸ್ಪಷ್ಟ ರೂಪುರೇಷೆಗಳು ಹಾಗೂ ಅವರ ಜೀವನ ಚರಿತ್ರೆಗಳನ್ನು ಸಿನಿಮಾ ಮಾಡುವ ಮೂಲಕ ಮುಂದಿನ ಯುವಪೀಳಿಗೆಗೆ ಮಾದರಿಯಾಗಲು ಸಮೂಹ ಮಾಧ್ಯಮಗಳ ಪ್ರಯತ್ನ ಅನನ್ಯವಾಗಿದೆ. ಶತಮಾನಗಳ ಹಿಂದಿನ ಮಹಾನ್ ವ್ಯಕ್ತಿಗಳು ಗಾಂಧೀಜಿ, ಬಸವಣ್ಣ, ಬುದ್ಧ, ಅಂಬೇಡ್ಕರ್, ಅಕ್ಕಮಹಾದೇವಿ, ಕಿತ್ತೂರ ರಾಣಿ ಚೆನ್ನಮ್ಮ, ಮದರ ತೆರಿಸಾರಂತಹ ಮಹಾನ್ ವ್ಯಕ್ತಿಗಳ ಜೀವನ ಸಾಧನೆ ಕುರಿತು ಚಲನಚಿತ್ರಗಳಿಂದ ನವಶಿಶುಪೀಳಿಗೆಗೆ ಮಾರ್ಗದರ್ಶನ ಹಾಗೂ ನೀತಿಪಾಠ. ಕೊಡುವ ಮುಂದಿನ ಜನಾಂಗಕ್ಕೆ ಮಾಧ್ಯಮಗಳ ದೃಶ್ಯಶ್ರಾವ್ಯ, ಟೆಲಿವಿಶನ್, ಕಂಪ್ಯೂಟರ್‌ನಂತಹ ಸಮೂಹ ಮಾಧ್ಯಮಗಳು ಹೊಸ ಯುಗದ ಯುವ ಜನಾಂಗ ನಿರ್ಮಿಸಲು ದಾರಿ ದೀಪವಾಗಿದೆ. ನವಜಾಗೃತಿ

ಮೂಡಿಸಲು ಹೊಸ ಹೊನಲನ್ನು ಹರಿಸುವ ಹೆದ್ದಾರಿಯಾಗಿವೆ. ಸಾಹಿತ್ಯದಲ್ಲಿ ಸಮೂಹ ಮಾಧ್ಯಮ. ಸಾಹಿತ್ಯವು ಸಮೂಹದಿಂದ ಬಹುದೊಡ್ಡ ಆಕಾಶವೇ ಜನರ ಅಂಗೈಯಲ್ಲಿ ಎನ್ನುವ ರೀತಿ ಸೃಷ್ಟಿಯಾಗಿದೆ.

ಸಾಹಿತ್ಯದಲ್ಲಿ ಸಮೂಹ ಮಾಧ್ಯಮಗಳು ಅಮೇರಿಕಾದಲ್ಲಿ ಹಾಗು ಕಾಶ್ಮೀರದಲ್ಲಿ ಉಗ್ರರ ದಾಳಿ, ಉತ್ತರಾಂಚಲದಲ್ಲಿ ಬುಗಿಲೆದ್ದ ಚಂಡಮಾರುತ ಟಿ. ವಿ. ಚಾನೆಲ್‌ಗಳ ಮೂಲಕ ಜನರು ಮನೆಯಲ್ಲಿ ಕುಳಿತು ಆಲಿಸುವಂತೆ ಮಾಡಿದೆ. ಪ್ರಪಂಚದ ಮೂಲೆ ಮೂಲೆಯಲ್ಲಿಯ ಸುದ್ದಿವಾಹಿನಿಯನ್ನು ಜನರಿಗೆ ತಲುಪಿಸುವ ಸಮೂಹ ಮಾಧ್ಯಮಗಳ ವೈಖರಿ ಅತಿ ಅದ್ಭುತ, ಅಗೋಚರ. ಆಧುನಿಕ ವರದಾನವೆಂದರೆ ತಪ್ಪಾಗುವುದಿಲ್ಲ. ಅದೇ ರೀತಿ ಸಾಹಿತ್ಯದಲ್ಲೂ ಸಮೂಹ ಮಾಧ್ಯಮದಿಂದ ತೊಂದರೆಗಳ ಪಾಲು ಇದೆ. ಹೇಗೆ ಸಮೂಹ ಮಾಧ್ಯಮಗಳು ವರದಾನವಾಗಿದೆಯೋ ಹಾಗೆ ಒಂದು ಕಡೆಯಿಂದ ಶಾಪವೂ ಕೂಡ ಆಗಿದೆ ಅನ್ನೋದು ಅಷ್ಟೆ ಕಟುವಾದ ಸತ್ಯವಾಗಿದೆ. ಹೇಗೆ ಒಂದು ನಾಣ್ಯದ ಎರಡು ಮುಖಗಳಂತೆ, ಒಂದು ಒಳ್ಳೆಯ ಇನ್ನೊಂದು ಕೆಟ್ಟದು. ಉದಾ: ಮಕ್ಕಳಿಗೆ ಮೊಬೈಲ್ ಬಳಕೆಯಿಂದ ಕಣ್ಣಿನ ದೃಷ್ಟಿ ಮೇಲೆ ಆಗುವ ಪರಿಣಾಮ. ದೂರದರ್ಶನಗಳಲ್ಲಿ ತೋರಿಸುವ ಧಾರವಾಹಿ ಹಾಗು ಚಲನಚಿತ್ರಗಳ ತೋರಿಸುವ ದೌರ್ಜನ, ದಬ್ಬಾಳಿಕೆ, ಅತ್ಯಾಚಾರ, ಹಿಂಸಾಚಾರ ಇವುಗಳಿಂದ ಜನಸಾಮಾನ್ಯರ ಸಂಬಂಧಗಳ ಕೊಂಡಿ ಕಳಚಿ ಬೀಳುತ್ತಿದೆ. ನಂಬಿಕೆ ಎಂಬ ಬೇರು ಕೊಳೆತು ನಾರುತ್ತಿದೆ.

ನಮ್ಮ ಹೆಮ್ಮೆಯ ಭಾರತೀಯ ಪರಂಪರೆ ಹಾಕಿಕೊಟ್ಟ ಸಂಸ್ಕೃತಿ ಸಮೃದ್ಧಿ ಹಾಳಾಗದಂತೆ ಉಳಿಸಿ ಬೆಳೆಸುವ ಸಾಹಿತ್ಯದಲ್ಲಿ ಇತಿಮಿತಿಯಾಗಿ ಸಮೂಹ ಮಾಧ್ಯಮಗಳ ಬಳಕೆ ಮಾಡಿದರೆ ನಮ್ಮ ಜೀವನ ಸುಂದರ ಸಾಗರದಂತೆ ನಲಿದಾಡುತ್ತದೆ. ಅದೆ ನಾವು ಅತಿ ಹೆಚ್ಚು ಬಳಸಿದರೆ ಸಮುದ್ರದಲ್ಲಿ ಚಂಡಮಾರುತವಾಗಿ ಹಾಳಾಗುತ್ತದೆ. ಅದು ಅನುಸರಿಸುವ ಜೀವನ ಗುಣಮಟ್ಟದ ಮೇಲೆ ಅನ್ವಯವಾಗಿದೆ. ಮನುಷ್ಯನ ಆರೋಗ್ಯದ ಹಿತದೃಷ್ಟಿಯಿಂದ ಬಿ.ಪಿ (ರಕ್ತದೊತ್ತಡ) ಕಡಿಮೆ ಮಾಡಲು, ಮನುಷ್ಯ ಸ್ವಚ್ಛಂದ ಜೀವನ ನಡೆಸಲು ಸಂಗೀತ ಬಹಳ ಇಂಪನ್ನು ಕೊಡುತ್ತದೆ. ದೇವಾನು ದೇವತೆಗಳಿಂದ ಬಂದ ಸಂಸ್ಕೃತಿ ಇದಾಗಿದೆ. (ಶಿವನ ಭೈರವನ ರೂಪತಾಳಿ ಕೋಪದ ನೃತ್ಯ ಭಂಗಿ). ಆಧುನಿಕತೆಯ ಸಮೂಹ ಮಾಧ್ಯಮವು ಒಂದು ಭಾಗವಾದ ಆಕಾಶವಾಣಿ ಅಂದರೆ ಆಕಾಶದಿಂದ ಬರುವ ಧ್ವನಿ: ಎಂದು ವರ್ಣಿಸಿದ್ದಾರೆ.

**ಸಾಹಿತ್ಯದಲ್ಲಿ ಮಾಧ್ಯಮಗಳಿಂದ ಆಗುವ ಉಪಯೋಗಗಳು:**

» ಸಾಹಿತ್ಯದಲ್ಲಿ ಮಾಧ್ಯಮಗಳ ಬಳಕೆ ಮೂಲಕ ಶೈಕ್ಷಣಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳು ಸಮೂಹ ಮಾಧ್ಯಮಗಳ ಮೂಲಕವೇ ನಡೆಯುತ್ತವೆ.

» ಪುರಾತನ ಮತ್ತು ಆಧುನಿಕತೆಯ ನಡುವಿನ ಸಜೀವ ಸೇತುವೆ ಈ ಡಿಜಿಟಲ್ ತಂತ್ರಜ್ಞಾನ ಮಾಧ್ಯಮವಾಗಿದೆ.
» ಪಾರಂಪರಿಕ ಸಾಹಿತ್ಯದ ಜೀವಂತಿಕೆಯನ್ನು ಮುಂದಿನ ತಲೆಮಾರಿಗೆ ತಲುಪಿಸಬಹುದು.
» ಹೆಚ್ಚಿನ ಆಧುನಿಕ ಕವಿಗಳಿಗೆ, ಸಹೃದಯರಿಗೆ ಪುರಾತನ ಸಾಹಿತ್ಯ, ಹಲವಾರು ಗ್ರಂಥಗಳು ಲಭ್ಯವಾಗುತ್ತವೆ. ಉದಾ: ‘‘ಸಾಹಿತ್ಯ ಸಂಗ್ರಹ’’ ವೆಬ್‌ಸೈಟ್‌ಗಳು.
» ಸಮೂಹ ಮಾಧ್ಯಮಗಳು ಹೊಸ ಚಿಂತನಾ ಶೈಲಿ, ಆಧುನಿಕತೆ, ಕನ್ನಡ ಸಾಹಿತ್ಯದದಲ್ಲಿ ಲೇಖಕರಿಗೆ ಹೊಸ ಓದುಗರನ್ನು, ಹೊಸ ಭಾವನೆಗಳ ಚಿಂತನೆಯನ್ನು, ಕಾವ್ಯಶಕ್ತಿ ಪಥವನ್ನು ತೆರೆಯುತ್ತದೆ.
» ಮಾಧ್ಯಮಗಳಿಂದ ಸಾಹಿತಿ ಮತ್ತು ಓದುಗರ ನಡುವೆ ನೇರ ಸಂಪರ್ಕವನ್ನು ಕಲ್ಪಿಸುತ್ತದೆ. ತಕ್ಷಣ ಸ್ಪಂದಿಸುವ ಮಾಧ್ಯಮವಾಗಿದೆ. ಉದಾ: ಜೂಮ್ ಮೀಟಿಂಗ್ ‘‘ಒಂದೆಡೆಗೆ ನಿರಂತರವಾಗಿ ಬರುವ ಹರಿವು’’.
» ಸಾಹಿತ್ಯವು ಸಮೂಹ ಮಾಧ್ಯಮಗಳಿಂದ ಬಹಳ ವಿಸ್ತಾರಗೊಂಡಿದೆ. ಕನ್ನಡ ಸಾಹಿತ್ಯವು ಇದರಿಂದ ದೂರವಿಲ್ಲ. ಇಂದಿನ ದಿನಗಳಲ್ಲಿ ಕನ್ನಡದ ಬಹುಪಾಲು ಪ್ರಮುಖ ಕೃತಿಗಳು ಡಿಜಿಟಲ್ ಮಾಧ್ಯಮದಲ್ಲಿ ಲಭ್ಯವಿದ್ದು, ಪ್ರತಿಯೊಬ್ಬರಿಗೆ ಕೈಗೆ ತಲುಪುವಂತಹ ಸ್ಥಿತಿ ನಿರ್ಮಿತವಾಗಿದೆ.
» ಸಾಹಿತ್ಯದಲ್ಲಿ ಮಾಧ್ಯಮಗಳ ಬಳಕೆಯಿಂದ ಕನ್ನಡದ ಹಳೆಯ ಶಿಲಾಶಾಸನಗಳು, ಹಸ್ತಪ್ರತಿಗಳು, ಐತಿಹಾಸಿಕ ಸಂಪತ್ತನ್ನು ಸಂರಕ್ಷಿಸುವಲ್ಲಿ ಮಹತ್ವದ ಸಾಧನೆಯಾಗಿದೆ. ಉದಾ: ’ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾ’’.
» ಕನ್ನಡ ವಿಶ್ವವಿದ್ಯಾಲಯ ಹಂಪಿ ಮುಂತಾದ ಸಂಸ್ಥೆಗಳು ಪುರಾತನ ಗ್ರಂಥಗಳನ್ನು ಸ್ಕ್ಯಾನ್ ಮಾಡಿ ಪಿ.ಡಿ.ಎಫ್ ರೂಪದಲ್ಲಿ ಲಭ್ಯವಿರಿಸುತ್ತಾರೆ.

## ಸಾಹಿತ್ಯದಲ್ಲಿ ಮಾಧ್ಯಮಗಳಿಂದ ಆಗುವ ಅನಾನುಕೂಲಗಳು:

» ಸಮೂಹ ಮಾಧ್ಯಮಗಳಿಂದ ಸಂಬಂಧಗಳ ಕೊಂಡಿ ಕಳಚಿ ಬಿದ್ದಿದೆ.
» ಯುವ ಜನಾಂಗಕ್ಕೆ ಮಾಧ್ಯಮಗಳು ಮಾರಕವಾಗಿದೆ.
» ಪತ್ರಿಕೆಗಳಿಂದ ಜನರಲ್ಲಿ ಕ್ರೋಧ, ಹಿಂಸೆ ಹುಟ್ಟುತ್ತಿದೆ.
» ದೂರದರ್ಶನಗಳಲ್ಲಿ ಪ್ರಸಾರವಾಗುವ ಧಾರವಾಹಿಗಳಲ್ಲಿನ ಹಿಂಸಾಚಾರದ ದೃಶ್ಯ, ಮಹಿಳೆಯರ ಮೇಲೆ ಅತ್ಯಾಚಾರದಂತಹ ಹಾನಿಕಾರಕ ಕೆಲಸಕ್ಕೆ ದಾರಿ ಮಾಡಿಕೊಡುತ್ತದೆ.
» ಟಿ. ವಿ.ಗಳ ಪ್ರಭಾವದಿಂದ ಓದುಗರ ಹವ್ಯಾಸವಂತೂ ಗಣನೀಯವಾಗಿ ಕಡಿಮೆಯಾಗುತ್ತಿದೆ.
» ಮನುಷ್ಯರ ನಡುವೆ ಸಂಬಂಧಗಳ ಕೊಂಡಿ ಕಳಚಿ ಸ್ವಾರ್ಥ ಸರದಾರರಾಗಿದ್ದಾರೆ.
» ಮಕ್ಕಳು ಶಿಕ್ಷಣದ ಕಡೆ ಗಮನ ಕೊಡದೆ ಮೊಬೈಲ್ ಹಿಡಿದು ಭವಿಷ್ಯದ ಮೇಲೆ ಬರೆ ಎಳೆದುಕೊಂಡಿದ್ದಾರೆ.

ಸಾಹಿತ್ಯದ ಸುದ್ದಿ ಮತ್ತು ಮಾಹಿತಿಯನ್ನು ಸಂವಹನ ಮಾಡುವ ಸಾಧನವೇ ಮಾಧ್ಯಮ. ಸಾಹಿತ್ಯ ಪ್ರಬಲ, ಬಲಿಷ್ಠ, ಶಕ್ತಿಶಾಲಿ ಆಗಲು ಮಾಧ್ಯಮಗಳ ಶಕ್ತಿ

ಅಚಲವಾಗಿದೆ. ಪ್ರಪಂಚದಲ್ಲಿ ಏನೇ ನಡೆದರು ಆರ್ಥಿಕ, ಸಾಮಾಜಿಕ, ರಾಜಕೀಯ, ಸುದ್ದಿಗಳು ಕುಳಿತಲ್ಲಿಗೆ ಬಂದು ತಲುಪುವ ಸಂದೇಶಗಳನ್ನು ಅಪ್‌ಡೇಟ್ ಮಾಡುತ್ತಾರೆ. ಮಾಧ್ಯಮಗಳ ಪ್ರಭಾವ ಜನರ ಆಲೋಚನೆ, ಭಾವನೆಗಳಿಗೆ ಸಂವೇದನೆಯಾಗಿವೆ. ಮಾಧ್ಯಮಗಳನ್ನು ಶಕ್ತಿಯಾಗಿ ಸಕಾರಾತ್ಮಕವಾಗಿ ಬಳಸಿಕೊಂಡರೆ ಸಾಹಿತ್ಯಕ್ಕೆ, ಸಮಾಜಕ್ಕೆ, ದೇಶಕ್ಕೆ, ಯುವ ಜನಾಂಗಕ್ಕೆ ದೊಡ್ಡ ಶಕ್ತಿಯಾಗಿ ಸಮೂಹ ಮಾಧ್ಯಮ ಪ್ರಭಾವ ಬೀರುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಸತೀಶ ಕುಮಾರ, (2021), ಸಮೂಹ ಮಾಧ್ಯಮ ಸಂಶೋಧನೆ, ಸ್ನೇಹ ಎಂಟರ್‌ಪ್ರೈಸಸ್, ಬೆಂಗಳೂರು.
2. ಪೂರ್ಣಿಮಾ ಟಿ.ಸಿ., (2006), ಆಧುನಿಕ ಸಮೂಹ ಮಾಧ್ಯಮಗಳು ಮತ್ತು ಕನ್ನಡ ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
3. ಜೋಸಫ್ ಕೆ.ಜೆ., (2014), ಸುದ್ದಿ ಸಂಪಾದನೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
4. ಸಿಬಂತಿ ಪದ್ಮನಾಭ ಕೆ.ವಿ, (2020), ಡಿಜಿಟಲ್ ಮಾಧ್ಯಮ ಲೋಕ, ಸಾಧನ ಪಬ್ಲಿಕೇಷನ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.